ಆಂದೋಲನವು ಜುಲೈ 1991ರಲ್ಲಿ ಪ್ರಾರಂಭವಾಗಿದ್ದು, ಸುಮಾರು 3,27,083 ಅನಕ್ಷರಸ್ಥರನ್ನು ಗುರುತಿಸಲಾಗಿದೆ.

ಆಂದೋಲನದ ಪೂರ್ವಭಾವಿಕಾರ್ಯಗಳಾದ ಕಲಿಕೆಗೆ ವಾತಾವರಣ ನಿರ್ಮಾಣ, ಪ್ರೇರಣೆ, ಗಣತಿ ಕಾರ್ಯಕಲಿಕಾ ಸಂಚಿ, ಕಲಿಕಾ ವಸ್ತು ಸ್ವಯಂ ಸೇವಕರ ಸಂಚಿಗಳ ತಯಾರಿಕೆ ಮೊದಲಾದವುಗಳನ್ನು ಹಮ್ಮಿಕೊಳ್ಳಲಾಗಿದೆ. ಹಾಗೂ ಬೋಧನಾ ಮತ್ತು ಕಲಿಕಾ ಕಾರ್ಯಕ್ರಮಗಳು ನಡೆಯುತ್ತಿವೆ.

ಇ) ಖರ್ಚುನ್ನು ಈ ಕೆಳಕಂಡಂತೆ ಮಾಡಲಾಗಿದೆ

1	ವಾತಾವರಣ ನಿರ್ಮಾಣ ಪ್ರೇರಣ	34,85,651.11
2	ತರಬೇತಿಗಾಗಿ	12,03,882.93
3	ಅನಕ್ಷರಸ್ಥರಗಣತಿ ಕಾರ್ಯ	3,19,113.29
4	ಕಲಿಕಾ ಸಂಚಿಸ್ವಯಂ ಸೇವಕರ ಸಂಚಿ ಇತ್ಯಾದಿ	129,09,212.30
5	ಆಡಳಿತ ನಿರ್ವಹಣೆ	15,99,536.21
6	ಸಾದಿಲ್ವಾರು ಮೌಲ್ಯಮಾಪನ ಡಾಕ್ಯುಮೆಂಟೇಷನ್ ಇತ್ಯಾದಿ	42,82,556.27
	ರೂ.	53,94,750.00

ಅಬಕಾರಿ ಉದ್ಯಮದ ರಾಷ್ಟ್ರೀಕರಣ

230 - ಶ್ರೀ ವೈ.ಕೆ. ರಾಮಯ್ಯ (ಕುಣಿಕಲ್) : ಮಾನ್ಯ ಮುಖ್ಯಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಅಬಕಾರಿ ಉದ್ಯಮವನ್ನು ಖಾಸಗಿಯವರಿಗೆ ವಹಿಸಿರುವುದರಿಂದ ಆಗಿರುವ ಅನಾಹುತಗಳು ಸರ್ಕಾರದವರ ಗಮನಕ್ಕೆ ಬಂದಿವೆಯೇ?

ಆ) ಈ ಉದ್ಯಮವನ್ನು ಖಾಸಗಿಯವರ ಕೈ ತಪ್ಪಿಸಿ ರಾಷ್ಟ್ರೀಕರಣ ಮಾಡಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಿ ಮಂತ್ರಿಗಳು) :

ಅ) ಇಲ್ಲಾ

ಆ) ಪ್ರಸಕ್ತದಲ್ಲಿ ಸರ್ಕಾರದ ಮುಂದೆ ಇಂತಹ ಯಾವುದೇ ಪ್ರಸ್ತಾವನೆ ಇಲ್ಲ.

ರೈತರ ಬೇಸಾಯಕ್ಕೆ ವಿದ್ಯುಚ್ಛಕ್ತಿ

232 - ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಮಾನ್ಯ ಮುಖ್ಯಿ ಮಂತ್ರಿಗಳು ಈ - ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತುಮಕೂರು ಜಿಲ್ಲೆಯ ರೈತರಿಗೆ ಬೇಸಾಯಕ್ಕೆ ವಿದ್ಯುಚ್ಛಕ್ತಿ ಒದಗಿಸುವಲ್ಲಿ ವಿಫಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ವಿಫಲತೆಯಿಂದ ರಾಜ್ಯದ ರೈತರಿಗೆ ಆಗಿರುವ ತೊಂದರೆ ಹಾಗೂ ಬೆಳೆ ಕಳೆದುಕೊಂಡ ರೈತರ ಮಾನಸಿಕ ಯಾತನೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಇದನ್ನು ನಿವಾರಣೆ ಮಾಡಲು ಸರ್ಕಾರ ಕಾರ್ಯಕ್ರಮ ನಿರೂಪಿಸಿ ರೈತರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳುತ್ತಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಿ ಮಂತ್ರಿಗಳು) :